ಅಷ್ಟೇ ಅಲ್ಲ, 'ನೀನು ಮಾಡಿರುವ ತಪ್ಪನ್ನು ನಾನು ನಿನ್ನ ಗಮನಕ್ಕೆ ತರುತ್ತಿರುವುದಾದರೂ ನಿನ್ನ ಮೇಲಿನ ಕಾಳಜಿಯಿಂದಲೇ' ಎಂಬ ಸಂದೇಶವನ್ನೂ ಶಿಷ್ಯನಿಗೆ ಗುರುಗಳು ಪರೋಕ್ಷರೂಪದಲ್ಲಿ ರವಾನಿಸಿದ್ದರು. ಶಿಷ್ಯನ ಪರಿವರ್ತನೆಗೆ ಕಾರಣವಾದದ್ದು ಬಹುಶಃ ಈ ಸಂದೇಶವೇ ಪ್ರಧಾನ ಕಾರಣವಾಗಿದ್ದಿರಬಹುದು. 'ನಿಮ್ಮ ತಪ್ಪನ್ನು ಟೀಕಿಸುವುದಕ್ಕಿಂತಲೂ ನಿಮ್ಮ ಏಳಿಗೆಯ ಬಗ್ಗೆ ನಮಗೆ ದಿಟವಾದ ಕಾಳಜಿ ಇರುವುದು'–ಎನ್ನುವುದನ್ನು ಮಕ್ಕಳಿಗೆ ಮನದಟ್ಟಾಗುವಂತೆ ನಮ್ಮ ನಡವಳಿಕೆಯನ್ನು ರೂಢಿಸಿಕೊಳ್ಳಬೇಕು. ತಪ್ಪು ಮಾಡುತ್ತಿರುವ ಮಕ್ಕಳ ಮನಃಪರಿವರ್ತನೆ ಆಗ ಸಹಜವಾಗಿಯೂ ಸುಲಭವಾಗಿಯೂ ಆಗುತ್ತದೆ. ಈ ಕುಶಲಸೂತ್ರವು ಮಕ್ಕಳ ಮೇಲಷ್ಟೇ ಅಲ್ಲ, ಎಲ್ಲರ ಮೇಲೂ ಪ್ರಭಾವಿಸಬಹುದಾದಂಥದ್ದು. ಮಕ್ಕಳು ನಮ್ಮ ನಡೆವಳಿಕೆಯನ್ನು ಸದಾ ಗಮನಿಸುತ್ತಿರುತ್ತಾರೆ. ಆದುದರಿಂದ ನಾವು ಅವರಿಗೆ ಉಪದೇಶ ಕೊಡುವುದು ಬೇಕಾಗಿಲ್ಲ. ಅವರಿಗೆ ಕೊಡಲು ಬಯಸಿರುವ ಉಪದೇಶಕ್ಕೆ ತಕ್ಕ ನಡೆವಳಿಕೆಯನ್ನು ನಾವು ರೂಢಿಸಿಕೊಂಡಿದ್ದೇ ಆದರೆ, ಅದನ್ನು ಗಮನಿಸುವ ಮಗು ಅದರಿಂದ ಪ್ರಭಾವಿತವಾಗಿ, ತಾನೂ ಕೂಡ ಅದನ್ನೇ ಅನುಸರಿಸಲು ತೊಡಗುತ್ತದೆ. ಮಕ್ಕಳು ನಮ್ಮ ಮಾತನ್ನು ಕೇಳುವುದಕ್ಕಿಂತಲೂ ಹೆಚ್ಚು ನಮ್ಮ ಕ್ರಿಯೆಯನ್ನು ಹೆಚ್ಚು ಗಮನಿಸುತ್ತಿರುತ್ತದೆ. ಹೀಗೆಯೇ ಶಿಷ್ಯರು ಕೂಡ ಗುರುಗಳ ಉಪದೇಶಕ್ಕಿಂತಲೂ ಅವರ ಜೀವನವಿಧಾನವನ್ನೂ ಸ್ವಭಾವವನ್ನೂ ಗಮನಿಸುತ್ತಿರುತ್ತಾರೆ.

ಕರುಣೆ–ಎನ್ನುವುದು ಬೌದ್ಧದರ್ಶನದ ಪ್ರಧಾನತತ್ತ್ವ. ಯಾವ ಗುರುವಿನ ಉದ್ದೇಶ ತನ್ನ ಹಿರಿಮೆಯನ್ನು ಪ್ರದರ್ಶಿಸುವುದಾಗಿರುತ್ತದೆಯೋ ಅಂಥವನು ಶಿಷ್ಯನ ತಪ್ಪುಗಳನ್ನೇ ಪಟ್ಟಿ ಮಾಡಿ ಅವನ್ನು ಖಂಡಿಸುತ್ತಿರುತ್ತಾನೆ; ಅಥವಾ ತನ್ನ ಗುರುತ್ವವನ್ನು ಸ್ಥಾಪಿಸಲು ಹೆಣಗುತ್ತಿರುತ್ತಾನೆ. ಆದರೆ ಯಾವ ಗುರುವಿನ ಉದ್ದೇಶ ಶಿಷ್ಯನ ಜೀವನವನ್ನು ರೂಪಿಸುವುದೇ ಉದ್ದೇಶವಾಗಿರುತ್ತದೆಯೋ ಅಂಥವನು ಅವನ ಕಲಿಕೆಗೆ ಅಡ್ಡಿಯಾಗಿರುವ ವಿವರಗಳನ್ನು ದೂರೀಕರಿಸುವ ಕಾರ್ಯದಲ್ಲಿ ತಲ್ಲೀನನಾಗಿರುತ್ತಾನೆ. ಆದರ್ಶ ಗುರುವಾಗಿರುವವನು ಶಿಷ್ಯನಲ್ಲಿ ಅರಿವನ್ನು ಬಲಾತ್ಕಾರದಿಂದ ತುಂಬುವ ಶ್ರಮವನ್ನು ತೆಗೆದುಕೊಳ್ಳುವುದಿಲ್ಲ; ಅದು ಅವನಲ್ಲಿ ಸಹಜವಾಗಿಯೇ ಅರಳುವಂಥ ವಾತಾವರಣವನ್ನು ಸೃಷ್ಟಿಸುತ್ತಾನೆ. ಕರುಣೆಯ ಸ್ವಭಾವವೇ ಅಂಥದ್ದು. ಕರುಣಾಶಾಲಿಯಾದ ಗುರುವು ಶಿಷ್ಯನನ್ನು ತನ್ನ ಸಿದ್ಧಾಂತಗಳ ಭಾರದಿಂದಲೋ ಶಿಕ್ಷೆಗಳ ಭಯದಿಂದಲೋ ಹಿಂಸಿಸಲಾರ. 'ನನಗೆ ನಿನ್ನ ಮೇಲೆ ಕನಿಕರವಿದೆ; ಕಾಳಜಿಯಿದೆ' ಎಂಬ ವಿಶ್ವಾಸವನ್ನು ಪ್ರತಿ ಕ್ಷಣವೂ ಶಿಷ್ಯನ ಮನಸ್ಸಿನಲ್ಲಿ ಮೂಡಿಸುವಂಥ ಕೆಲಸವನ್ನು ಒಳ್ಳೆಯ ಗುರು ಸದಾ ಮಾಡುತ್ತಿರುತ್ತಾನೆ. 'ಶಿಷ್ಯನ ಹಣವನ್ನು ಅಪಹರಿಸುವವನು ನಿಜವಾದ ಗುರುವಲ್ಲ; ಶಿಷ್ಯನ ಮನಸ್ಸನ್ನು ಅಪಹರಿಸಬಲ್ಲವನೇ ಗುರು' ಎಂಬ ಮಾತೊಂದು ಸಂಸ್ಕೃತದಲ್ಲಿದೆ. ಶಿಷ್ಯನನ್ನು ಉದ್ಧರಿಸುವುದೇ ಗುರುವಿನ ನಿಜವಾದ ಕರ್ತವ್ಯ; ಅಂತೆಯೇ ಮಕ್ಕಳ ಜೀವವನ್ನು ರೂಪಿಸಬೇಕಾದುದೇ ಪಾಲಕರ ಮತ್ತು ಪೋಷಕರ ನಿಜವಾದ ಕರ್ತವ್ಯ. ಈ ಕರ್ತವ್ಯದ ಆಚರಣೆಗೆ ಆವಶ್ಯಕವಾದುದು ಶಿಷ್ಯನ ದಂಡನೆಯೋ ಮಕ್ಕಳ ಖಂಡನೆಯೋ ಅಲ್ಲ; ಗುರುಗಳ ಮತ್ತು ತಂದೆತಾಯಂದಿರ ಪ್ರತ್ಯಕ್ಷ ಜೀವನವಿಧಾನ–ನಡೆವಳಿಕೆಗಳು. 'ನನ್ನ ಜೀವನವೇ ನನ್ನ ಸಂದೇಶ' (**My life is my message**)–ಎಂದ ಗಾಂಧೀಜಿಯವರ ಮಾತು ಇಲ್ಲಿ ಮನನೀಯ.